ಇ) ತಾಲ್ಲೂಕಿನ ಪ್ರದೇಶದಲ್ಲಿ ಒಂದು ಹೈಪವರ್ ಸ್ಟೇಷನನ್ನು ಮತ್ತೊಂದು ಹೈಪವರ್ ಸ್ಟೇಷನ್‌ನ್ನು ಅದಷ್ಟು ಶೀಘ್ರದಲ್ಲಿಯೇ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಮಾಗಡಿ ತಾಲ್ಲೂಕಿನಲ್ಲಿ ಗೃಹ ಬಳಕೆ ಹಾಗೂ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ನ ಅಭಾವ ಅಷ್ಟಾಗಿ ಇರುವುದಿಲ್ಲ

ಆ) ಮಾಗಡಿ ತಾಲ್ಲೂಕಿನ ಕೇಂದ್ರ ಸ್ಥಾನವಾದ ಮಾಗಡಿ ಮತ್ತು ತಾವರೆಕೆರೆಗಳಲ್ಲಿ ತಲಾ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಮಾಗಡಿ 66:11 ಕೆವಿ ಸಬ್ ಸ್ಟೇಷನ್ನಿನಲ್ಲಿ 6.3 ಎಂ.ವಿ.ಎ. ಸಾಮರ್ಥ್ಯದ ಒಂದು ಮತ್ತು 8 ಎಂ.ವಿ.ಎ. ಸಾಮರ್ಥ್ಯದ ಇನ್ನೊಂದು ಪವರ್ ಟ್ರಾನ್ಸ್‌ಫಾರ್ಮರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ತಾವರೇಕೆರೆಯ 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್ನಿನಲ್ಲಿ 5 ಎಂ.ವಿ.ಎ. ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್‌ಫಾರ್ಮರ್ ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೇ, ನೆರೆಯ ತಾಲ್ಲೂಕಾದ ಕುಣಿಗಲ್ ತಾಲ್ಲೂಕಿನ ಅಂಚೇಪಾಳ್ಯದಲ್ಲಿರುವ 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್ನಿಂದಲೂ ಮಾಗಡಿ ತಾಲ್ಲೂಕಿನ ಕೆಲವು ಪ್ರದೇಶಗಳಿಗೆ ವಿದ್ಯುತ್ ಸರಬರಾಜಾಗುತ್ತಿದೆ.

ಇ) ಈ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಒಂದು 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್‌ನ್ನು ಸ್ಥಾಪಿಸಲು ತಾಂತ್ರಿಕ ಸಮಿತಿಯ ಅನುಮೋದನೆ ದೊರೆತಿದ್ದು 1996-97ರ ಸಾಲಿನಲ್ಲಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಅಧ್ಯಕ್ಷರು : ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಪ್ರಕಟಣೆ

ಪ್ರಕಟಣೆ

ಅಧ್ಯಕ್ಷರು : ದಿನಾಂಕ 8-9-1995ರಂದು ನಡೆದ ವಿಧಾನ ಸಭೆಯ ಕಾರ್ಯ ಕಲಾಪಗಳ ಸಲಹಾ ಸಮಿತಿ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಪ್ರತಿದಿನ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 6Ë00 ಗಂಟೆಯವರೆಗೆ ಸಭೆ ಸೇರಿ, ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

11-9-1995	1. ಪ್ರಶ್ನೋತ್ತರ
ಸೋಮವಾರ	2. ಗಮನ ಸೆಳೆಯುವ ಸೂಚನೆಗಳು
ಮತ್ತು	
12-9-1995	3. ಶಾಸನ ರಚನೆ
ಮಂಗಳವಾರ	4. ಶಿಕ್ಷಣ ಇಲಾಖೆ
	5. ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
	6. ಕಾರ್ಮಿಕ ಮತ್ತು ಸಮಾಜ ಕಲ್ಯಾಣ ಇಲಾಖೆ
	7. ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ